ಇದು ಈಗಾಗಲೇ ಬಹುತೇಕವಾಗಿ ದೊಡ್ಡ ದೊಡ್ಡ ನಗರಗಳ ಸುತ್ತಲೂ ಕೆಲವರು ಕೃಷಿ ಭೂಮಿಯನ್ನು ಸರಕಾರದ ನಿಯಮಗಳಿಗೆ ವಿರುದ್ಧವಾಗಿ ಕೃಷಿಯೇತರ ಉಪಯೋಗಕ್ಕೆ ಅವಶ್ಯಕತೆ ಇರತಕ್ಕಂತಹ ಹಣವನ್ನು ತುಂಬಿದೆ. ಪರವಾನಿಗಿ ಪಡೆದುಕೊಳ್ಳದೆ ಇಂತಹ ಕಟ್ಟಡಗಳನ್ನು ಕಟ್ಟಿದ್ದಾರೆ. ಹಿಂದೆ ಕಟ್ಟಿದಂತಹವರಿಗೆ ರೆಗ್ಯುಲರೈಸ್ ಮಾಡಬೇಕು. ಮುಂದೆ ಹಾಗೆ ಕಟ್ಟಲು ಬಿಡಬಾರದು ಎಂಬ ದೃಷ್ಟಿಯಿಂದ ದಂಡವನ್ನು ವಿಧಿಸಲಾಗಿದೆ. ಮುಂದೆ ಈ ರೀತಿಯಲ್ಲಿ ಯಾರಾದರೂ ಮಾಡಿದರೆ ದಂಡ ಮತ್ತು ಶಿಕ್ಷೆ ಎರಡನ್ನೂ ಮಾಡುವುದಕ್ಕೆ ಇದರಲ್ಲಿ ಅವಕಾಶ ಮಾಡಿದ್ದೇವೆ. ಇನ್ನು ರೈತರು ತಮ್ಮ ಜಮೀನಿನಲ್ಲಿ ಮನೆ ಕಟ್ಟುವುದರ ಬಗ್ಗೆ ದಂಡ ಕೊಡುವ ಪ್ರಶ್ನೆ ಇಲ್ಲ. ಅವರಿಗೆ ಫಾರ್ಮ್ ಹೌಸನ್ನು ಕಟ್ಟಿಕೊಳ್ಳಲಿಕ್ಕೆ ಅವಕಾಶ ಇದೆ. ಅವರಿಗೆ ದಂಡ ವಿಧಿಸಲಿಕ್ಕೆ ನಿಯಮ ಇಲ್ಲ. ಅಂತಹ ಪ್ರಕರಣಗಳು ಒಂದು ವೇಳೆ ಇದ್ದಲ್ಲಿ ಅದನ್ನು ನನ್ನ ಗಮನಕ್ಕೆ ತಂದಲ್ಲಿ ಸರಿಪಡಿಸುತ್ತೇನೆ.

XII. ಉಳ್ಳಾಲ ಕ್ಷೇತ್ರದಲ್ಲಿ ವೋಲ್ಟೇಜ್ ಕಡಿಮೆಯಾಗಿ ವಿದ್ಯುತ್ ಕೊರತೆಯಾಗಿರುವುದು

ಶ್ರೀ ಡಿ. ಎಂ. ಇದಿನಬ್ಬ.—ಉಳ್ಳಾಲ ಕ್ಷೇತ್ರದಲ್ಲಿ ವಿದ್ಯುತ್ ಕೊರತೆ ವೋಲ್ಟೇಜು ಕಡಿಮೆಯಾಗಿ ಗ್ರಾಹಕರಿಗೆ ಆಗಾಗ ತೊಂದರೆ ಉದ್ದಗಡ್ತಿರುವ ವಿಚಾರ ತಿಳಿದಿರುವುದೇ ಆಗಿದೆ. ಈ ತೊಂದರೆ ತಪ್ಪಿಸಲು ಕೊಣಾಜೆಯಲ್ಲಿ ಸ್ಟೇಷನ್ ಸ್ಟಾಫ್ ಕಡ್ಡಾಯ ಮಾಡಬೇಕು. ಸ್ಟೇಷನ್ ಸ್ಟಾಫ್ ಇಟ್ಟು, ನಾಲ್ಕು ಲೈನುಗಳ ಗಮನ ಸರಿಯಾಗಿ ಹರಿಸಿದರೆ ಉಳ್ಳಾಲ ಕ್ಷೇತ್ರದ ವಿದ್ಯುತ್ ತೊಂದರೆ ನೀಗುವಂತಾದೀತು. ಆದಕಾರಣ ಕೊಣಾಜೆ ಸ್ಟೇಶನ್‌ನಿನಲ್ಲಿ ಖಾಯಂ ಸ್ಟಾಫ್ ಇಟ್ಟು ಈ ಭಾಗದ ಜನರಿಗಿರುವ ವಿದ್ಯುತ್ ತೊಂದರೆಯನ್ನು ಸರಿಪಡಿಸುವುದು ಆಗತ್ಯವಾಗಿರುತ್ತದೆ. ಈ ಕುರಿತು ವಿದ್ಯುತ್ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ವಿದ್ಯುತ್ ಸಚಿವರು ಸದನದಲ್ಲಿ ಇಲ್ಲ. ಅವರಿಂದ ಮಾನ್ಯ ಸದಸ್ಯರಿಗೆ ಸೂಕ್ತವಾದ ಉತ್ತರವನ್ನು ತರಿಸಿಕೊಡಲು ಏರ್ಪಾಡು ಮಾಡುತ್ತೇನೆ.

XIII. ಶಿವಮೊಗ್ಗ ಜಿಲ್ಲೆಯಲ್ಲಿ ವಿಲೇಜ್ ಅಕೌಂಟೆಂಟ್ ಹುದ್ದೆಗೆ ಬೇಕಾದ ಅರ್ಜಿಗಳು ದೊರೆಯದಿರುವುದು

ಶ್ರೀ ಎಂ. ರಾಮಪ್ಪ (ಬಳ್ಳಾರಿ).—ಶಿವಮೊಗ್ಗ ಜಿಲ್ಲೆಯಲ್ಲಿ ವಿಲೇಜ್ ಅಕೌಂಟೆಂಟ್ ಹಾಗೂ ಅಗ್ರಿಕಲ್ಚರಲ್ ಅಸಿಸ್ಟೆಂಟ್‌ರುಗಳು ನೇಮಕಾತಿ ಬಗ್ಗೆ ಅರ್ಜಿಗಳನ್ನು ಕರೆಯಲಾಗಿದ್ದು ೨೧ನೇ ದಿನಾಂಕ ಕೊನೆಯ ದಿನವಾಗಿರುತ್ತದೆ. ಆದರೆ ಅರ್ಜಿ ಫಾರಂಗಳು ದೊರೆಯುತ್ತಿಲ್ಲ. ಕಡೆಯ ದಿನಾಂಕವನ್ನು ಮುಂದುವರಿಸಿ ಕೂಡಲೇ ಅರ್ಜಿ ಫಾರಂಗಳು ದೊರಕುವಂತೆ ಶೀಘ್ರಕ್ರಮವನ್ನು ಕೈಕೊಳ್ಳಬೇಕೆಂದು ಸರಕಾರವನ್ನು ನಾನು ಒತ್ತಾಯಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಗಮನಕ್ಕೆ ತಂದ ವಿಚಾರದಲ್ಲಿ ದಿನಾಂಕವನ್ನು ಮುಂದುವರಿಸುವುದಕ್ಕೆ ಪರಿಶೀಲನೆ ಮಾಡುತ್ತೇನೆ.

XIV. ಕೃಷಿ ಸಹಾಯಕ ಹುದ್ದೆಗಳಿಗೆ ಅರ್ಜಿಗಳನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಕಳಿಸುವುದು ಮತ್ತು ಕೊನೆಯ ದಿನಾಂಕವನ್ನು ಮುಂದೂಡುವುದು

ಶ್ರೀ ವಸಂತ ವಿ. ಸಾಲ್ಯಾನ್.—ಕರ್ನಾಟಕ ಸರಕಾರವು ಕೃಷಿ ಇಲಾಖೆಗೆ ೭೦೦ ಕೃಷಿ ಸಹಾಯಕ ಹುದ್ದೆಗಳಿಗೆ ಫಾರಂ ನಂ. ೧೧ರಲ್ಲಿ ಅರ್ಜಿ ಆಹ್ವಾನಿಸಿದ್ದಾರೆ. ಆದರೆ ಈ ಅರ್ಜಿ ನಮೂನೆ ಇನ್ನೂ ಎಂದರೆ ನಿನ್ನೆವರೆಗೆ ದಕ್ಷಿಣ ಕನ್ನಡವನ್ನು ಇನ್ನೂ ತಲುಪಿಲ್ಲ. ಅರ್ಜಿ ಸಲ್ಲಿಸಲು ಕಡೇ ದಿನಾಂಕ ೨೦-೩-೧೯೮೬ ರಂದು ಆ ದಿನಕ್ಕೆ ದಕ್ಷಿಣ ಕನ್ನಡ ಜಿಲ್ಲೆಯ ಯಾವ ಅಭ್ಯರ್ಥಿಗಳೂ ಅರ್ಜಿ ಸಲ್ಲಿಸದಂತೆ ಇದು ಪೂರ್ವ

ನಿಯೋಜಿತ ಕ್ರಮವೇ ಎಂಬ ಸಂಶಯ ಇದ್ದು, ಅದು ಎದ್ದು ತೋರುವುದಂ. ಇದರಿಂದಾಗಿ ದಕ್ಷಿಣ ಕನ್ನಡದ ಸಾವಿರಾರು ವಿದ್ಯಾವಂತರಾದ ನಿರುದ್ಯೋಗಿ ಯುವಕರಿಗೆ ಉದ್ಯೋಗ ಅವಕಾಶ ಸಿಗಲಿಕ್ಕೆ ತೊಂದರೆಯಾಗಿದೆ. ಹಾಗಾಗಿ ಕೂಡಲೇ ಅರ್ಜಿ ನಮೂನೆಯನ್ನು ದಕ್ಷಿಣ ಕನ್ನಡ ಜಿಲ್ಲೆಗೆ ರವಾನಿಸಿ ಕಡೇ ದಿನಾಂಕವನ್ನು ಮುಂದೂಡಿ ದಕ್ಷಿಣ ಕನ್ನಡದ ಅಭ್ಯರ್ಥಿಗಳಿಗೆ ಅರ್ಜಿ ಸಲ್ಲಿಸಲು ಅನುವು ಮಾಡಿ ಕೊಡಬೇಕಾಗಿ ಸರಕಾರವನ್ನು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ಈಗಾಗಲೇ ಪ್ರಸ್ತಾಪ ಮಾಡಿದಂತೆ ಬೇರೆ ಇಲಾಖೆಯವರಂ ಈ ವಿಚಾರಗಳಲ್ಲಿ ಅರ್ಜಿಗಳನ್ನು ಕರೆದಿದ್ದಾರೆ. ಈ "ಸಿ" ಫಾರ್ಮನ್ನು ಮುಂದ್ರಣ ಇಲಾಖೆಯವರು ಪ್ರಕಟಣೆ ಮಾಡಬೇಕಾಗಿದೆ. ನನಗೆ ಗೊತ್ತಿರುವ ಹಾಗೆ ಈಗಾಗಲೇ ೭೦ ಸಾವಿರಕ್ಕಿಂತ ಹೆಚ್ಚು ಅರ್ಜಿಗಳು ಬಂದಿವೆ. ಕಳೆದ ಸಂದರ್ಭದಲ್ಲಿ ಇಂತಹ ೭೫೦ ಜಾಗಗಳಿಗೆ ಅರ್ಜಿಯನ್ನು ಕರೆದಾಗ ಒಂದು ಲಕ್ಷ ಅರ್ಜಿಗಳು ಬಂದಿದ್ದುವು. ಆ ಕಾರಣಕ್ಕಾಗಿ ಎಲ್ಲಾ ಜಿಲ್ಲೆಗಳಿಗೂ ಅರ್ಜಿಗಳು ಮುಂಟ್ಟಿಲ್ಲ ಎನ್ನುತಕ್ಕಂತಹದ್ದನ್ನು ವಿಚಾರ ಮಾಡಬಹುದು. ಆದುದರಿಂದ ಮಾನ್ಯ ಸಾಲಿಯಾನ್‌ರವರಂ ದಕ್ಷಿಣ ಕನ್ನಡ ಜಿಲ್ಲೆಗೆ ಮಾತ್ರ ಮುಂಟ್ಟಿಲ್ಲ, ಇದು ಬೇಕಂತೆ ಮಾಡಿದಯತ್ನವೇ ಎನ್ನುವ ಆಪರ ಗಂಮಾನ ಸರಿಯಲ್ಲ. ಅಂತಹ ಪೂರ್ವ ದೃಷ್ಟಿಕೋನ ಸರಕಾರಕ್ಕೆ ಇಲ್ಲ. ಬೇರೆ ಬೇರೆ ಜಿಲ್ಲೆಗಳಿಗೂ ಕೂಡ ಇದು ಮುಂಟ್ಟಿರಲಿಕ್ಕಿಲ್ಲ. ಇದಕ್ಕೆ ಕಾರಣ ಮುದ್ರಣ ಇಲಾಖೆಯಲ್ಲಿ ಅರ್ಜಿ ನಮೂನೆಗಳು ಅಷ್ಟು ಪ್ರಮಾಣದಲ್ಲಿ ಇಲ್ಲದಿರುವುದು ಆಗಿದೆ, ಅಲ್ಲದೇ ಬೇರೆ ಬೇರೆ ಇಲಾಖೆಯವರು ಒಟ್ಟಿಗೆ ವಿಚಾರವನ್ನು ಪ್ರಸ್ತಾಪ ಮಾಡಿರುವುದರಿಂದ ಅರ್ಜಿಗಳನ್ನು ಕರೆದಿರುವುದರಿಂದ ಸ್ವಲ್ಪಮಟ್ಟಿಗೆ ಹೀಗೆ ತೊಂದರೆಯಾಗಿರಬಹುದು. ಆದಕಾರಣ ಇದರ ಕೊನೆಯ ದಿನಾಂಕವನ್ನು ಏಪ್ರಿಲ್ ೧೮ರವರೆಗೆ ಮುಂದುವರಿಸಬೇಕೆಂಬ ಪ್ರಸ್ತಾವನೆ ಸರಕಾರದ ಮುಂದಿರುವುದರಿಂದ ಅರ್ಜಿಗಳು ಎಲ್ಲಾ ಕಡೆಗಳಿಗೂ ತಲುಪುವಂತಹ ವ್ಯವಸ್ಥೆಯನ್ನು ಮಾಡುತ್ತೇನೆ.

XV. ರಾಜ್ಯದ ನಿವೃತ್ತ ಅಧ್ಯಾಪಕರಿಗೆ ನಿವೃತ್ತಿವೇತನವನ್ನು ಹೆಚ್ಚಿಸುವುದು

ಶ್ರೀ ಜಿ. ಎಸ್. ಆಚಾರ್.—ಕರ್ನಾಟಕ ರಾಜ್ಯದಲ್ಲಿ ನಿವೃತ್ತ ಅಧ್ಯಾಪಕರ ಸಮಸ್ಯೆ ಅದರಲ್ಲಿಯೂ ಬಹು ಹಿಂದೆ ನಿವೃತ್ತರಾದವರ ಸ್ಥಿತಿ ಅತ್ಯಂತ ದಾರುಣವಾಗಿದೆ, ಇತ್ತೀಚೆಗೆ ನಿವೃತ್ತರಾದವರಂ ಹೆಚ್ಚಿಗೆ ಪೆನ್ಷನ್ ಪಡೆಯುತ್ತಿದ್ದಾರೆ. ಕಡಿಮೆಂ ವೇತನದಲ್ಲಿ ಹಿಂದೆ ನಿವೃತ್ತರಾದವರು ಅದೂ ೨೨ ವರ್ಷಕ್ಕೆ ನಿವೃತ್ತರಾದವರಂ ಆರ್ಥಿಕವಾಗಿ ಕಷ್ಟಕರವಾದ ಪರಿಸ್ಥಿತಿಯಲ್ಲಿದ್ದಾರೆ. ಈ ವಿಚಾರ ಸಮಗ್ರವಾಗಿ ಪರಿಶೀಲಿಸಲು ನೌಕರಿಗೆ ನೇಮಿಸಲಾದ ವೇತನ ಆಯೋಗಕ್ಕೆ ನಿವೃತ್ತರ ಸಮಸ್ಯೆ ಕುರಿತು ಪರಿಶೀಲಿಸಲು ಸಹಾ ನಿರ್ದೇಶಿಸಬೇಕು, ಈ ಹಿಂದೆ ಸರಕಾರ ಎರಡು ಬಾರಿ ನೌಕರರಿಗೆ ಪರಿಹಾರ ಕೊಟ್ಟಾಗ, ನಿವೃತ್ತರಿಗೂ ಕೊಟ್ಟಿದ್ದಾರೆ. ಆದರೆ ೧೯೪೫ ಆಗಸ್ಟ್ ಒಂದರಿಂದ ನೌಕರರಿಗೆ ವೇತನದ ೭ ೫ರಷ್ಟು ಪರಿಹಾರ ನೀಡಿದಾಗ ನಿವೃತ್ತರಿಗೆ ಕೊಟ್ಟಿಲ್ಲ. ಈ ಪರಿಹಾರ ನಿವೃತ್ತರಿಗೂ ೧-೮-೧೯೪೫ರಿಂದ ನೀಡಬೇಕು ಎಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಚ್.ಜಿ. ಗೋವಿಂದಗೌಡ.—ಈಗ ತಾನೇ ನಮಗೆ ಈ ವಿಷಯಂ ಗೊತ್ತಾಗಿದೆ. ಇದರ ಬಗ್ಗೆ ಮಾಹಿತಿಯನ್ನು ತರಿಸಿ ಮಾನ್ಯ ಸದಸ್ಯರಿಗೆ ವಿಷಯವನ್ನು ತಿಳಿಸುತ್ತೇನೆ.

XVI. ಕರ್ನಾಟಕದಲ್ಲಿ ಅಂಚೆ ತೆರಪಿನ ಮೂಲಕ ಬಿ.ಎಡ್. ತರಬೇತಿಯನ್ನು ನೀಡುವುದು.

ಶ್ರೀ ಎನ್. ಎಚ್. ಗೌಡ.—ತಮಿಳುನಾಡಿನ ಅಣ್ಣಾಮಲೈ ವಿಶ್ವವಿದ್ಯಾನಿಲಯವು ಅಂಚೆ ತೆರಪಿನ ಯೋಜನೆಯ ಮೂಲಕ ಬಿ.ಎಡ್. ತರಬೇತಿ ನೀಡುವ ವ್ಯವಸ್ಥೆಯನ್ನು ಮಾಡಿದ್ದು ಕರ್ನಾಟಕದ ಬೆಂಗಳೂರು ಮತ್ತು ಮೈಸೂರು ಈ ಎರಡು ಕಡೆ ಬಿ.ಎಡ್. ಪರೀಕ್ಷಾ ಕೇಂದ್ರಗಳನ್ನು ತೆರೆದಿದೆ. ಕರ್ನಾಟಕದ ಯಾವ ವಿಶ್ವವಿದ್ಯಾನಿಲಯವೂ ಇಂತಹ ವ್ಯವಸ್ಥೆಯನ್ನು ಮಾಡಿಲ್ಲವಾದ್ದರಿಂದ ಕರ್ನಾಟಕದಲ್ಲಿ ನೌಕರಿಯಂ ಮೇಲಿದ್ದು ಬಿ.ಎಡ್. ತರಬೇತಿ ಪಡೆಯಲು ಬಯಸುವ ಸಾವಿರಾರು ಅಭ್ಯರ್ಥಿಗಳು ಅಣ್ಣಾಮಲೈ ವಿಶ್ವವಿದ್ಯಾನಿಲಯದ ಈ ವ್ಯವಸ್ಥೆಯನ್ನು ಅವಲಂಬಿಸಬೇಕಾಗಿದೆ. ಅಣ್ಣಾಮಲೈ ವಿಶ್ವವಿದ್ಯಾನಿಲಯವು ಕೈಗೊಂಡ ಈ ವ್ಯವಸ್ಥೆಯನ್ನು ಕರ್ನಾಟಕ ವಿಶ ವಿದ್ಯಾಲಯಗಳು ಕೈಗೊಂಡಿದ್ದರೆ